'ಹೌದು, ಅದು ಸತ್ಯ ಆದರೆ ತಪ್ಪಲ್ವಾ ಗಿರಿಜಾ. ನಿಂಗೆ ಮದ್ವೆಯಾಗಕ್ಕೆ ಏನು. ನಿಂದೂ ಅಂತ ಸಂಸಾರ ಎಲ್ಲಾ ಬೇಡ್ವೇನೇ?'


'ಹೌದು ಇಂದಮ್ಮಾ, ಮೊದಲು ಅನ್ನಿಸಿತ್ತು. ಆದ್ರೆ ಈಗಿನ ಸ್ಥಿತಿಯಲ್ಲಿ ನಂಗೆ ಅವರು ಬೇಕು, ಅವ್ರಿಗೆ ನಾನು. ಊರಿಗೆಲ್ಲ ಗೊತ್ತಾದ ಮೇಲೆ ನನ್ನ ಯಾರು ಮದ್ವೆ ಆಗ್ತಾರೆ. ನಂಗೂ ಈಗ ಯಾರನ್ನೂ ಮದ್ವೆ ಆಗಬೇಕು ಅಂತ ಅನಿಸ್ತಾ ಇಲ್ಲ.'

'ಅವ್ರಿಗೆ ಮದ್ವೆ ಆಗಿ ಹೆಂಡ್ತಿ ಮಕ್ಕಳಿವೆ.'

'ಹೌದು, ಹೆಂಡ್ತಿಗೆ ಹುಶಾರಿಲ್ಲ. ಸದಾ ಬೆನ್ನುನೋವು. ಅವ್ರೂ ಸುಖ ಪಟ್ಟದ್ದು ಅಷ್ಟರಲ್ಲೇ ಇದೆ ಅಲ್ವ ಇಂದಮ್ಮ.'

'ಅದು ಅವ್ರ ಸಮಸ್ಯೆ ಗಿರಿಜಾ, ಅವ್ರು ಹಾಗೇ ಹೇಳಿ ನಿನ್ನ ತಲೆ ಹಾಳು ಮಾಡಿದಾರೆ ಅನ್ಸುತ್ತೆ. ನೀನು ಹುಚ್ಚು ಹತ್ತಿಸಿಕೊಂಡು ಇದೀಯಾ, ಬಿಡು ಇದ್ನ.'

'ಛೇ, ಛೇ.. ಹಾಗೆಲ್ಲ ಹೇಳಬೇಡಿ ಇಂದಮ್ಮ. ಅವ್ರು ಒಳ್ಳೆಯವ್ರೇ. ನಂಗೇ ಆಗಬೋದು ಅಂತಿರುವಾಗ ಅವ್ರ ಒತ್ತಾಯ ಅಂತ ಎಲ್ಲಿ ಇರುತ್ತೆ. ಅವ್ರು ಹೆಂಡ್ತಿನ ನೋಡಿಕೊಳ್ಳೊ ರೀತಿ ನೋಡಿಯೇ ನಾನು ಮರುಳಾದೆ. ದಿನಾ ಬೆಳಗಾದ್ರೆ ಅಮ್ಮನ ಹೊಡೆಯೋ ಅಪ್ಪ, ಕುಡಿದು ಮೈಮೇಲೆ ಬರುವ ಅಣ್ಣ ಇವ್ರ ಮುಂದೆ ಅವ್ರು ನಂಗೆ ದೇವರಾಗಿ ಕಂಡ್ರು. ಅವ್ರೂ ತುಂಬಾ ಸಾರಿ ಹೇಳಿದ್ರು ಮದ್ವೆ ಆಗಿ ಹೋಗು ಅಂತ. ನಂಗೇ ಮನಸ್ಸಿಲ್ಲ. ಇರೋವಷ್ಟು ಆಯುಷ್ಯ ನಾನು ಹೀಗೆ... ಅಷ್ಟಕ್ಕೂ ಅವ್ರ ಹೆಂಡ್ತಿಗೂ ಗೊತ್ತು. ಗೊತ್ತಿಲ್ಲದ ಹಾಗೇ ಇರ್ತಾರೆ ಅಷ್ಟೇ.'



'ಹುಚ್ಚು ನಿಂಗೆ, ಗಿರಿಜಾ. ಈಗ ಪರ್ವಾಗಿಲ್ಲ. ಮೈಯಲ್ಲಿ ಶಕ್ತಿ ಇರೋವಷ್ಟು ದುಡಿತೀಯ. ಆಮೇಲೇನು. ನಂಗೇನೋ ನೀನು ಮದ್ವೆ, ನಿಂದೂ ಅಂತ ಒಂದು ಸಂಸಾರ ಮಾಡ್ಕೋಳ್ಳೊದು ಸರಿ ಅನ್ಸುತ್ತೆ.'

ಸುಮ್ಮನೆ ನಕ್ಕಳು.

ಘಾಟಿ ದಾಟಿ ಊರು ಬರುತ್ತಿದ್ದಂತೆ ಇಂದುಮತಿಗೆ ಕೊಂಚ ಸಮಾಧಾನವಾಯಿತು. ಒಂದೆರಡು ಗಂಟೆಗಳಲ್ಲಿ ಮನೆ ತಲುಪಿ ಇನ್ನೊಂದು ರೌಂಡು ನಿದ್ದೆ ಮುಗಿಸಿ ಎದ್ದು ನಿಶ್ಚಿತಾರ್ಥಕ್ಕೆ ಹೊರಟು ಕಾರಿನಲ್ಲಿ ಕೂತಾಗ ಆಯಿಯ ಬಳಿ ತಡೆಯದೇ ಕೇಳಿದಳು: 'ಹೇಗಿದಾಳೆ ಆಯಿ ಗಿರಿಜಾ.'

'ಮದ್ವೆಯಾಯ್ತು ಕಣೆ, ಚನ್ನ ಇದ್ದ ನೋಡು. ದೊಡ್ಡ ಕುಡುಕ, ಪುಂಡ. ಅವ್ನ ಮದ್ವೆಯಾಗಿದಾಳೆ. ದಿನಾ ಕುಡ್ದು ಬಂದು ಹೊಡಿತಾನಂತೆ, ಸಾಯಲು ಬಿದ್ದಿದ್ದಾಳೆ. ಮೊದಲೇ ಚೆನ್ನಾಗಿದ್ಲು ಅಂತ ಅನಿಸ್ತಿದೆ ಈಗ' ತನ್ನಷ್ಟಕ್ಕೆ ಗೊಣಗಿದಂತೆ ಅಂದಳು.

ಅಯ್ಯೋ! ಬಾಣಲೆಯಿಂದ ಬೆಂಕಿಗೆ ಬಿದ್ದಳೇ...

ನಿಶ್ಚಿತಾರ್ಥದ ಕಾರ್ಯಕ್ರಮಗಳು ನಡೆಯುತ್ತಿದ್ದಾಗ ಇಂದುಮತಿಯ ಕಣ್ಣು ವಿಠು ಕಕ್ಕನ ಕಡೆಗೆ ಹೊರಳಿತು. ತನ್ನನ್ನು ನೋಡಿ ಒಮ್ಮೆ ಕಣ್ಣಿನಲ್ಲಿ ಮಿಂಚು ತೋರಿಸಿ, 'ಮಾತಿಗೆ ಗೌರವ ಕೊಟ್ಟು ಬಂದ್ಯಲ್ಲ ಇಂದು, ಖುಷಿಯಾಯ್ತು' ಎನ್ನುವಾಗಲೂ ಕಕ್ಕ ಸೊರಗಿದ್ದು ನಿಚ್ಚಳವಾಗಿ ಕಂಡಿತ್ತು.

ಸಂಜೆ ಹೊತ್ತಿಗೆ ಗಿರಿಜೆ ಇಂದುವನ್ನು ಹುಡುಕಿಕೊಂಡು ಬಂದಳು. ಬೆಳದಿಂಗಳ ನಗುವೊಂದೇ ಹಾಗೇ ಇದ್ದುದು. ಸಂಕಟವಾಯ್ತು ಇಂದುಮತಿಗೆ. ಬಾಯಿ ಮುಚ್ಚಿಕೊಂಡು ಇರಬೇಕಿತ್ತು ನಾನು.

'ಗಡದ್ದಾ ನಿಶ್ಚಿತಾರ್ಥ ಇಂದಮ್ಮ...'

'ಹೂ, ಏನ್ ಹೀಗಾಗಿದ್ದಿ ಗಿರಿಜಾ...'